ಕ್ರ.ಸಂ	ಯೋಜನೆಗಳು	ಬಿಡುಗಡೆಯಾದ ಹಣ	ಖರ್ಚು ಮಾಡಿರುವ ಹಣ
5	ಇಂದಿರಾ ಆವಾಸ್ ಯೋಜನೆ	4849.01	5626.86
6	ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ	2686.99	3661.75
7	ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ	2270.53	2302.78
8	ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ	1409.02	1381.03
9	ಪಶ್ಚಿಮಘಟ್ಟ ಅಭಿವೃದ್ಧಿ ಕಾರ್ಯಕ್ರಮ	1552.66	1369.84
10	ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಕಾರ್ಯಕ್ರಮ	1456.13	1369.02
11	ಗ್ರಾಮೀಣ ನೀರು ಸರಬರಾಜು (ಎಆರ್‌ಡಬ್ಲ್ಯೂಎಸ್)–ಡಿಡಿಪಿ	786.68	1074.43
12	ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ–ಗ್ರಾಮೀಣ ನೀರು ಸರಬರಾಜು	1200.00	1072.57
13	ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ–ಗ್ರಾಮೀಣ ಆವಾಸ್ ಯೋಜನೆ	1500.00	986.60
14	ಉದ್ಯೋಗ ಭರವಸೆ ಯೋಜನೆ–ವಾಟರ್‌ಶೆಡ್	786.10	876.86
15	ಡಿಆರ್‌ಡಿಎ ಆಡಳಿತ	797.98	741.00
16	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ	573.00	452.88
17	ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ	51.66	51.66
18	ಯುರೋಪಿಯನ್ ಎಕಾನಾಮಿಕ್ ಕಮ್ಯೂನಿಟಿ ಎಐಡ್‌ಟು ಟ್ರೈನಿಂಗ್ ಸೆಂಟರ್ (ಎಎನ್‌ಎಸ್‌ಐಆರ್‌ಡಿ)	44.38	44.38
19	ರಾಷ್ಟ್ರೀಯ ಸುಧಾರಿತ ಒಲೆ ಕಾರ್ಯಕ್ರಮ	10.00	10.84
	ಒಟ್ಟು	60745.87	60753.66

ಟಿಪ್ಪಣಿ: ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹನ್ನೊಂದನೇ ಹಣಕಾಸು ಆಯೋಗದ ಅನುದಾನ 2001–02 ಸಾಲಿನ 78.82 ಕೋಟಿ ರೂ.ಗಳನ್ನು 2001–02ನೇ ಸಾಲಿನಲ್ಲಿ, 2000–01ನೇ ಸಾಲಿನ ಹಾಗೂ 2002–03ನೇ ಸಾಲಿನ 157.64 ಕೋಟಿ ರೂ.ಗಳನ್ನು 2002–03ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ. ಒಟ್ಟು ಅನುದಾನ ರೂ. 236.46 ಕೋಟಿಗಳಲ್ಲಿ ಈವರೆಗೆ ರೂ. 165.62 ಕೋಟಿಗಳನ್ನು ಖರ್ಚು ಮಾಡಲಾಗಿದೆ.

2003ನೇ ಸಿ.ಇ.ಟಿಯ ಜೀವಶಾಸ್ತ್ರ ಪತ್ರಿಕೆಯಲ್ಲಿನ ತಪ್ಪುಗಳಿಂದ ವಿದ್ಯಾರ್ಥಿಗಳಿಗೆ ಉಂಟಾಗಿರುವ ತೊಂದರೆ ಬಗ್ಗೆ

4089 (4058) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003ನೇ ಸಿಇಟಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ಈ ಪರೀಕ್ಷಾ ಫಲಿತಾಂಶವನ್ನು ಯಾವಾಗ ಪ್ರಕಟಿಸಲಾಯಿತು;

ಇ) ಎಷ್ಟು ಫಲಿತಾಂಶಗಳನ್ನು ಕೂಡಲೇ ಪ್ರಕಟಿಸದೆ ತಡೆ ಹಿಡಿಯಲಾಯಿತು; ಇದಕ್ಕೆ ಕಾರಣಗಳೇನು;

ಈ) ಸಿಇಟಿಯ ಜೀವಶಾಸ್ತ್ರ ಪತ್ರಿಕೆಗೆ ಸಿಇಟಿ ಕೇಂದ್ರ ನೀಡಿರುವ ಉತ್ತರಗಳು ತಪ್ಪಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಪಿಯುಸಿ ಪರೀಕ್ಷೆಯಲ್ಲಿ ಶೇ. 85 ರಿಂದ 95 ಅಂಕ ಪಡೆದವರಿಗೆ ಈ ಸಿಇಟಿ ಪರೀಕ್ಷೆಯಲ್ಲಿ ಶೂನ್ಯ ಅಂಕ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಸರಿ ಉತ್ತರ ಬರೆದ ವಿದ್ಯಾರ್ಥಿಗಳಿಗೆ ಅಂಕಗಳನ್ನು ಕಡಿತಗೊಳಿಸಿರುವುದು ನಿಜವಲ್ಲವೆ;

ಋ) ಈ ಬಗ್ಗೆ ಸರ್ಕಾರ ಕೂಡಲೇ ಉನ್ನತ ಮಟ್ಟದ ತನಿಖೆಗೆ ಆದೇಶಿಸುತ್ತದೆಯೇ?

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) 1,07,935

ಆ) ದಿನಾಂಕ: 23ನೇ ಜೂನ್ 2003 ರಂದು ಪ್ರಕಟಿಸಲಾಯಿತು.

ಇ) ಅರ್ಹತಾ ಪರೀಕ್ಷೆಯ ಅಂಕಪಟ್ಟಿಗಳನ್ನು ಕಳುಹಿಸದೇ ಇದ್ದ ಎರಡು ಸಾವಿರ ಅಭ್ಯರ್ಥಿಗಳ ಫಲಿತಾಂಶಗಳು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿದ ನಂತರ ಎಲ್ಲಾ ಅಭ್ಯರ್ಥಿಗಳ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಈ) ಬಂದಿದೆ.

ಉ) ಇಲ್ಲ

ಊ) ನಿಜವಲ್ಲ.

ಋ) ಉದ್ಭವಿಸುವುದಿಲ್ಲ.

ಶಿವಾಜಿನಗರ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವ ಸರ್ಕಾರಿ ಶಾಲೆಗಳು

4090 (4532) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಎಷ್ಟು ಶಾಲೆಗಳು ಪೀಠೋಪಕರಣ, ಶೌಚಾಲಯ, ಶಾಲಾ ಕೊಠಡಿ, ಗ್ರಂಥಾಲಯ, ಆಟದ ಮೈದಾನ, ಪ್ರಯೋಗಾಲಯ, ಇತ್ಯಾದಿ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ;

ಇ) 2003–04ನೇ ಸಾಲಿನಲ್ಲಿ ಈ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಇವುಗಳಿಗೆ 2003–04ನೇ ಸಾಲಿನಲ್ಲಿ ಶೈಕ್ಷಣಿಕವಾಗಿ ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಖರ್ಚು ಮಾಡಲಿರುವ ಹಣವೆಷ್ಟು?